Total No. of Questions : 50 ] [ Total No. of Printed Pages : 4

Code No. : **105-K**

**Diploma in Physical Education**

# ಭಾಷಾ ಸಂಪದೀಕರಣ — ಕನ್ನಡ

# CONTENT ENRICHMENT IN LANGUAGE — KANNADA

Date : 01. 06. 2018 ]

Time : 10.00 A.M. to 1.00 P.M. ] [ Max. Marks : 80

***ಸೂಚನೆ :*** i) ಉತ್ತರಗಳು ಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿರಲಿ.

ii) ಪ್ರಶ್ನೆ ಸಂಖ್ಯೆಗಳನ್ನು ತಪ್ಪದೇ ಬರೆಯಿರಿ.

iii) ಅನಾವಶ್ಯಕವಾಗಿ ಹಾಳೆಗಳನ್ನು ಬಳಸಬೇಡಿ.

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಒಂದು ಪುಟಕ್ಕೆ ಮೀರದಿರಲಿ : $4 \times 5 = 20$

1) ಮಾತೃಭಾಷೆಯ ಪ್ರಾಮುಖ್ಯತೆಯನ್ನು ಕುರಿತು ಬರೆಯಿರಿ.

2) ಕನ್ನಡದ ವ್ಯಂಜನಗಳ ಉಚ್ಚಾರಣಾ ಸ್ಥಾನದ ದೃಷ್ಟಿಯಿಂದ ಎಷ್ಟು ವಿಧಗಳಾಗಿ ವಿಂಗಡಿಸಬಹುದು ವಿವರಿಸಿ.

3) ಸ್ವರಗಳೆಂದರೇನು ? ಸ್ವರಗಳ ವಿಧಗಳನ್ನು ವಿವರಿಸಿ.

4) ಬರಹ ಎಂದರೇನು ? ಮಾತು ಹಾಗೂ ಬರಹಕ್ಕೆ ವ್ಯತ್ಯಾಸವನ್ನು ತಿಳಿಸಿ.

5) ಕನ್ನಡ ಸಂಧಿಗಳಲ್ಲಿ ಎಷ್ಟು ವಿಧ ? ಉದಾಹರಣೆಯೊಂದಿಗೆ ವಿವರಿಸಿ.

6) ವಾಕ್ಯ ರಚನೆ ಎಂದರೇನು ? ಅದರ ವಿಧಗಳನ್ನು ವಿವರಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಹತ್ತು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $10 \times 3 = 30$

7) ಪ್ರಾದೇಶಿಕ ಭಾಷೆಯ ಅರ್ಥ ಮತ್ತು ಪ್ರಾಮುಖ್ಯತೆಯನ್ನು ಬರೆಯಿರಿ.

8) ಭಾಷೆಯ ಸ್ವರೂಪ ಲಕ್ಷಣಗಳನ್ನು ತಿಳಿಸಿ.

9) ಧ್ವನಿಯ ಅರ್ಥ ಸ್ವರೂಪವನ್ನು ಬರೆಯಿರಿ.

10) ಕನ್ನಡ ಲಿಪಿಯ ಲಕ್ಷಣಗಳನ್ನು ಬರೆಯಿರಿ.

11) ಅಕ್ಷರಗಳ ವರ್ಗೀಕರಣವನ್ನು ಚಿತ್ರಿಸಿ.

12) ಯಾದೃಚ್ಛಿಕತೆ ಮತ್ತು ಪ್ರಾವೀಣ್ಯತೆ ಎಂದರೇನು ? ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ.

13) ವಚನಗಳೆಂದರೇನು ? ಇವುಗಳಲ್ಲಿ ಎಷ್ಟು ವಿಧ ? ಉದಾಹರಣೆಯೊಂದಿಗೆ ವಿವರಿಸಿ.

14) ಸಣ್ಣ ಕಥೆಯ ಲಕ್ಷಣಗಳೇನು ? ಸಣ್ಣ ಕಥೆಗಳ ಜನಕ ಎಂದು ಯಾರನ್ನು ಕರೆಯುತ್ತಾರೆ ? ಸಣ್ಣ ಕಥೆಗಳನ್ನು ರಚಿಸಿದ ಕಥೆಗಾರರು ಯಾರ್‍ಯಾರು ?

15) ಹೊಸಗನ್ನಡದ ಕಾವ್ಯಧಾರೆಯನ್ನು ಎಷ್ಟು ಭಾಗಗಳಾಗಿ ವಿಭಾಗಿಸಲಾಗಿದೆ ? ಇವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

16) ಅಲಂಕಾರ ಎಂದರೇನು ? ಉಪಮಾಲಂಕಾರ ಹಾಗೂ ರೂಪಕಾಲಂಕಾರಕ್ಕೆ ಇರುವ ವ್ಯತ್ಯಾಸವನ್ನು ಉದಾಹರಣೆಯೊಂದಿಗೆ ವಿವರಿಸಿ.

17) ಕೃದಂತದಲ್ಲಿ ಎಷ್ಟು ವಿಧ ? ಅವು ಯಾವುವು ? ಉದಾಹರಣೆಯೊಂದಿಗೆ ವಿವರಿಸಿ.

18) ನಾಮಪದದಲ್ಲಿ ಎಷ್ಟು ಪ್ರಕಾರ ? ಉದಾಹರಣೆಯೊಂದಿಗೆ ವಿವರಿಸಿ.

19) ದಿನಚರಿಯ ಅರ್ಥ ಮತ್ತು ಅನುಕೂಲತೆಗಳನ್ನು ತಿಳಿಸಿ.

20) ನುಡಿ ಬೆರಕೆ ಮತ್ತು ನುಡಿ ಜಿಗಿತದ ಅರ್ಥ ಬರೆಯಿರಿ.

III. ಈ ಕೆಳಗಿನವುಗಳಲ್ಲಿ ಯಾವುದಾದರೂ **ಏಳು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಎರಡು–ಮೂರು ವಾಕ್ಯಗಳಲ್ಲಿರಲಿ : $7 \times 2 = 14$

21) ಉಪಭಾಷೆ ಎಂದರೇನು ? ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ.

22) ಹಳೆಗನ್ನಡ ಕಾವ್ಯದ ಲಕ್ಷಣಗಳೇನು ?

23) ನಡುಗನ್ನಡ ಸಾಹಿತ್ಯದ ಪ್ರಸಿದ್ಧ ಶಿವಶರಣರು, ಕವಿಗಳು ಯಾರು ?

24) ತ್ರಿಪದಿ ಎಂದರೇನು ? ಉದಾಹರಣೆ ಕೊಡಿ.

25) ಷಟ್ಪದಿ ಎಂದರೇನು ? ಷಟ್ಪದಿಯ ವಿಧಗಳನ್ನು ಬರೆಯಿರಿ.

26) ನಿಷೇಧಾರ್ಥಕ ವಾಕ್ಯ ಎಂದರೇನು ? ಉದಾಹರಣೆ ಕೊಡಿ.

27) ಗಮಕ ಸಮಾಸ ಎಂದರೇನು ? ಉದಾಹರಣೆ ಕೊಡಿ.

28) ವಿಭಕ್ತಿ ಪ್ರತ್ಯೆಯ ಎಂದರೇನು ? ಅವು ಯಾವುವು ?

29) ಸವರ್ಣದೀರ್ಘ ಸಂಧಿ ಎಂದರೇನು ? ಉದಾಹರಣೆ ಕೊಡಿ.

30) ಲಿಪಿ ಎಂದರೇನು ? ಲಿಪಿಯನ್ನು ಎಷ್ಟು ಭಾಗಗಳಾಗಿ ಗುರುತಿಸಬಹುದು ? ಆವು ಯಾವುವು ?

31) ಕನ್ನಡ ಲಿಪಿಯ ಇತಿಹಾಸವನ್ನು ತಿಳಿಸಿ.

32) ವ್ಯಕ್ತಿ ಭಾಷೆಯ ಅರ್ಥವನ್ನು ತಿಳಿಸಿ.

IV. ಈ ಕೆಳಗಿನವುಗಳಲ್ಲಿ ಯಾವುದಾದರೂ **ಹತ್ತು** ಪ್ರಶ್ನೆಗಳಿಗೆ ಉತ್ತರಿಸಿ : $10 \times 1 = 10$

33) ದೇಶೀಯ ಶಬ್ದಗಳು ಎಂದರೇನು ?

34) ವ್ಯಾಕರಣ ಎಂದರೇನು ?

35) ಜಸ್ತ್ವ ಸಂಧಿ ಎಂದರೇನು ?

36) ಬಹುವ್ರೀಹಿ ಸಮಾಸ ಎಂದರೇನು ?

37) ಕ್ರಿಯಾಪದ ಎಂದರೇನು ?

38) ಅಲಂಕಾರದ ಅರ್ಥವನ್ನು ಬರೆಯಿರಿ.

39) ಜನಪದ ಸಾಹಿತ್ಯದ ಅರ್ಥವನ್ನು ಬರೆಯಿರಿ.

40) ಜೀವನ ಚರಿತ್ರೆಯ ಅರ್ಥವನ್ನು ಬರೆಯಿರಿ.

41) ಲೇಖನ ಚಿಹ್ನೆಗಳೆಂದರೇನು ?

42) ಸಂಯೋಜಿತ ವಾಕ್ಯ ಎಂದರೇನು ?

43) ಇತ್ತೀಚೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಸಾಹಿತಿ ಯಾರು ?

44) ಕನ್ನಡದ ಮೊಟ್ಟ ಮೊದಲ ಶಾಸನ ಯಾವುದು ?

V. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : 6 × 1 = 6

| 'ಅ' | 'ಬ' |
|---|---|
| 45) ಕುವೆಂಪು | i) ಶೃಂಗೇರಿ |
| 46) ಬೇಂದ್ರೆ | ii) ಕಾವ್ಯಾನಂದ |
| 47) ಚನ್ನವೀರ ಕಣವಿ | iii) ಅಂಕೋಲ ತಾಲ್ಲೂಕು |
| 48) ಎಸ್.ವಿ. ಪರಮೇಶ್ವರ ಭಟ್ಟ | iv) 14 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು |
| 49) ಸಿದ್ಧಯ್ಯಾ ಪುರಾಣಿಕ | v) ಮಂಕುತಿಮ್ಮನ ಕಗ್ಗ |
| 50) ಬಿ.ಎಂ. ಶ್ರೀಕಂಠಯ್ಯ | vi) ನಾಕುತಂತಿ |
| | vii) 65 ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು |
| | viii) 1994 ರಲ್ಲಿ ನಿಧನ |